## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ಎಲ್ಲಾ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಏಕರೂಪವಾಗಿ ಮಾದರಿ ವೆಚ್ಚ ಭರಿಸಲು ಸರ್ಕಾರದ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಸಕಇ/189/ಪಕವಿ 96, ಬೆಂಗಳೂರು, ದಿನಾಂಕ: 03-9-1996.
2. ಸರ್ಕಾರದ ಆದೇಶ ಸಂಖ್ಯೆ: ಸಕಇ/11/ಮೊದೇಶಾ 2001 ಬೆಂಗಳೂರು, ದಿನಾಂಕ: 12-12-2001
3. ಸರ್ಕಾರದ ಆದೇಶ ಸಂಖ್ಯೆ: ಸಕಇ/06/ಎಸ್‌ಎಲ್‌ಪಿ 98, ಬೆಂಗಳೂರು ದಿನಾಂಕ: 29-01-2002
4. ಸರ್ಕಾರದ ಆದೇಶ ಸಂಖ್ಯೆ: ಇಡಿ 272 ಯೋಯೋಕಾ 2006, ಬೆಂಗಳೂರು ದಿನಾಂಕ: 14.11.2006.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ರವರ ಪತ್ರ ಸಂಖ್ಯೆ: ಕವಶಿಸಸ/ ಸಿಆರ್ (ಶಿಕ್ಷಣ)-148(ಬಿ)/2005-06/344,ದಿ:19-6-2006-ಮ-14-11 ಹಾಗೂ 02.07.07ರ ಪತ್ರ

*****************

**ಪ್ರಸ್ತಾವನೆ:-**

ಮೇಲೆ (1)ರಲ್ಲಿ ಓದಲಾದ ದಿನಾಂಕ:3-9-1996ರ ಸರ್ಕಾರಿ ಆದೇಶದಲ್ಲಿ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಾದರಿ ವೆಚ್ಚ ನಿಗದಿಪಡಿಸಲ್ಪಟ್ಟಿದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:12-12-2001ರ ಸರ್ಕಾರಿ ಆದೇಶದಲ್ಲಿ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಾದರಿ ವೆಚ್ಚ ನಿಗದಿಪಡಿಸಲ್ಪಟ್ಟಿದೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ:29-1-2002ರ ಸರ್ಕಾರಿ ಆದೇಶದಲ್ಲಿ ಪರಿಶಿಷ್ಟ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಾದರಿ ವೆಚ್ಚ ನಿಗದಿಪಡಿಸಲ್ಪಟ್ಟಿದೆ.

ಮೇಲೆ (4)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶಿಕ್ಷಣ ಇಲಾಖೆಯಿಂದ ಆರಂಭಿಸಲ್ಪಟ್ಟು ಈಗ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವರ್ಗಾಯಿಸಲ್ಪಟ್ಟ 32 ವಸತಿ ಶಾಲೆಗಳಿಗೆ ಅನ್ವಯವಾಗುವಂತೆ ಹೊಸ ದರಗಳನ್ನು ನಿಗದಿಪಡಿಸಿ ಆದೇಶಿಸಲಾಗಿದೆ.

ಮೇಲೆ (5)ರಲ್ಲಿ ಓದಲಾದ ದಿನಾಂಕ 19.06.2006ರ ಪತ್ರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು "ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ಇರುವ ಮಾದರಿ ವೆಚ್ಚವನ್ನು ಪರಿಶಿಷ್ಟ ಜಾತಿ/ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಾದರಿ ವೆಚ್ಚಕ್ಕೆ ಹೋಲಿಸಿದಾಗ ಕೆಲವು ವ್ಯತ್ಯಾಸಗಳಿದ್ದು ಸದರಿ ತಾರತಮ್ಯವನ್ನು ನಿವಾರಿಸಿ ಏಕರೂಪದ ಮಾದರಿ ವೆಚ್ಚವನ್ನು ಅನುಷ್ಠಾನಗೊಳಿಸಲು ಕೋರಿರುತ್ತಾರೆ.

48

ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಾದರಿ ವೆಚ್ಚಕ್ಕೂ ಪರಿಶಿಷ್ಟ ಜಾತಿ/ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಾದರಿ ವೆಚ್ಚಕ್ಕೂ ಇರುವ ಅಂತರವು ಈ ಕೆಳಕಂಡಂತಿದೆ.

| ಕ್ರ. ಸಂ. | ನೀಡುತ್ತಿರುವ ಬಾಬ್ತುಗಳ ವಿವರ | ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ವಸತಿ ಶಾಲೆಗಳು | ಹಿಂದುಳಿದ ವರ್ಗ/ ಅಲ್ಪಸಂಖ್ಯಾತರು/ ಏಕಲವ್ಯ ಮಾದರಿ / ಶಿಕ್ಷಣ ಇಲಾಖೆಯ ವಸತಿ ಶಾಲೆಗಳು |
|---|---|---|---|
| ಆವರ್ತಕ ವೆಚ್ಚಗಳು:- | | (ರೂ.ಗಳಲ್ಲಿ) | |
| 1) | ಆಹಾರದ ವೆಚ್ಚ (ಪ್ರತಿ ಮಾಹೆ, ಪ್ರತಿ ವಿದ್ಯಾರ್ಥಿಗೆ) | (500/-) 650 | (500/-) 650 |
| 2) | ಸಮವಸ್ತ್ರ, ಶೂ, ಸಾಕ್ಸ್ (ಪ್ರತಿ ವರ್ಷ, ಪ್ರತಿ ವಿದ್ಯಾರ್ಥಿಗೆ) ಎರಡು ಜೊತೆ | 800/- (ಸ್ವೆಟರ್ ಸೇರಿ) | 800/- |
| 3) | ಪಠ್ಯಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳು | - | 500/- |
| 4) | ಇತರ ವೆಚ್ಚಗಳು (ಟೂತ್ ಪೇಸ್ಟ್, ಸೋಪು, ಬ್ರಷ್, ಎಣ್ಣೆ ಇತ್ಯಾದಿ) | - | 100/- |
| 5) | ವೈದ್ಯಕೀಯ ವೆಚ್ಚ (ವಾರ್ಷಿಕ ಪ್ರತಿ ಶಾಲೆಗೆ) | 5,000/- | 10,000/- |
| 6) | ವಿದ್ಯುಚ್ಛಕ್ತಿ, ನೀರು ಮತ್ತು ಇತರ ಸಾದಿಲ್ವಾರು ವೆಚ್ಚಗಳು | 3,000/- | ವಾಸ್ತವ ವೆಚ್ಚ |
| ಅನಾವರ್ತಕ ವೆಚ್ಚ:- | | | |
| 1) | ಹಾಸಿಗೆ ಹೊದಿಕೆ (ಪ್ರತಿ ಹೊಸ ವಿದ್ಯಾರ್ಥಿಗೆ) | 500/- | 600/- |
| 2) | ಮಂಚ, ಟ್ರಂಕುಗಳು (ನೂತನ ವಿದ್ಯಾರ್ಥಿಗಳಿಗೆ) | 3,000/- | 3,000/- |

ಕೋರಿಕೆಯನ್ನು ಪರಿಶೀಲಿಸಿ ಏಕರೂಪದ ಮಾದರಿ ವೆಚ್ಚ ನಿಗದಿಪಡಿಸುವ ಅಗತ್ಯವನ್ನು ಸರ್ಕಾರ ಮನಗಂಡಿದೆ. ಆದ್ದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 61 ಮೊದೇಶಾ,**
**ಬೆಂಗಳೂರು ದಿನಾಂಕ:19-11-2007.**

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ನಡೆಸಲಾಗುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಈ ಕೆಳಗೆ ನಮೂದಿಸಿರುವಂತೆ ಮಾದರಿ ವೆಚ್ಚವನ್ನು ಪರಿಷ್ಕರಿಸಿ ಆದೇಶಿಸಲಾಗಿದೆ.

| ಕ್ರ. ಸಂ. | ಮಾದರಿ ವೆಚ್ಚದ ಬಾಬ್ತುಗಳ ವಿವರ | ದರ |
|---|---|---|
| ಆವರ್ತಕ ವೆಚ್ಚಗಳು:- | | (ರೂ.ಗಳಲ್ಲಿ) |
| 1) | ಆಹಾರದ ವೆಚ್ಚ (ಪ್ರತಿ ಮಾಹೆ, ಪ್ರತಿ ವಿದ್ಯಾರ್ಥಿಗೆ) | (500/-) 650 |
| 2) | ಸಮವಸ್ತ್ರ, ಶೂ, ಸಾಕ್ಸ್ (ಪ್ರತಿ ವರ್ಷ, ಪ್ರತಿ ವಿದ್ಯಾರ್ಥಿಗೆ) ಎರಡು ಜೊತೆ | 800/- |

| | |
|---|---|
| ಪಠ್ಯಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳು (ವಾರ್ಷಿಕ) | 500/- |
| ಇತರ ವೆಚ್ಚಗಳು (ಟೂತ್ ಪೇಸ್ಟ್, ಸೋಪು, ಬ್ರಷ್, ಎಣ್ಣೆ ಇತ್ಯಾದಿ) (ಪ್ರತಿ ಮಾಹೆ, ಪ್ರತಿ ವಿದ್ಯಾರ್ಥಿಗೆ) | 100/- |
| ವೈದ್ಯಕೀಯ ವೆಚ್ಚ (ವಾರ್ಷಿಕ ಪ್ರತಿ ವಸತಿ ಶಾಲೆಗೆ ವಾರ್ಷಿಕವಾಗಿ ಸಂದರ್ಶಕ ವೈದ್ಯರ ಗೌರವಧನ ಸೇರಿ) | 10,000/- |
| ವಿದ್ಯುಚ್ಛಕ್ತಿ, ನೀರು ಮತ್ತು ಇತರ ಸಾದಿಲ್ವಾರು ವೆಚ್ಚಗಳು ಪ್ರತಿ ವಸತಿ ಶಾಲೆಗೆ (ವಾರ್ಷಿಕ) | ವಾಸ್ತವ ವೆಚ್ಚ |
| ಬಾಡಿಗೆ | ಲೋಕೋಪಯೋಗಿ ಇಲಾಖೆ ನಿಗಧಿಪಡಿಸಿದಂತೆ |
| ಇತರೆ ವೆಚ್ಚ (ಪರೀಕ್ಷಾ ಶುಲ್ಕ) (ವಾರ್ಷಿಕ) | ವಾಸ್ತವ ವೆಚ್ಚ |
| ಅನಾವರ್ತಕ ವೆಚ್ಚ:- | |
| ಹಾಸಿಗೆ ಹೊದಿಕೆ (ಪ್ರತಿ ಹೊಸ ವಿದ್ಯಾರ್ಥಿಗೆ) | 600/- |
| ಮಂಚ/ಟ್ರಂಕುಗಳು (ನೂತನ ವಿದ್ಯಾರ್ಥಿಗಳಿಗೆ) | 3,000/- |
| ಪೀಠೋಪಕರಣಗಳು | ವಾಸ್ತವ ವೆಚ್ಚ |
| ಪ್ರಯೋಗ ಶಾಲೆಯ ಉಪಕರಣಗಳು | ವಾಸ್ತವ ವೆಚ್ಚ |
| ಬೋಧನ ಸಲಕರಣೆಗಳು | ವಾಸ್ತವ ವೆಚ್ಚ |
| ಕ್ರೀಡಾ ಸಲಕರಣೆಗಳು | ವಾಸ್ತವ ವೆಚ್ಚ |
| ಗ್ರಂಥಾಲಯ | ವಾಸ್ತವ ವೆಚ್ಚ |

ಮೇಲ್ಕಂಡ ಮುಂದರಿ ವೆಚ್ಚದಿಂದ ಪ್ರಸ್ತುತ ಸಾಲಿನಲ್ಲಿ ಉಂಟಾಗಬಹುದಾದ ಹೆಚ್ಚುವರಿ ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯಯ ಅವಕಾಶದಡಿಯಲ್ಲಿಯೇ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು ಹಾಗೂ ಈ ಸಂಬಂಧ ಹೆಚ್ಚುವರಿ ಅನುದಾನದ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 481/ವೆಚ್ಚ-3/07 ದಿನಾಂಕ: 19.10.2007 ರಲ್ಲಿ ನೀಡಲಾದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಸುಬ್ಬಯ್ಯ) 12/11
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

19/11

ಗೆ,
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್/ [illegible] ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ ಜಿಲ್ಲಾ ಪರಿಶಿಷ್ಟ ವರ್ಗದ ಅಧಿಕಾರಿಗಳು,
6. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-3, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು